# ಚಿತ್ತೇ ಕೃಪಾ ಸಮರನಿಷ್ಠುರತಾ...

❑ ಬ್ರಹ್ಮಚಾರಿ ಪ್ರಹ್ಲಾದ

**ಮಾತೃವಾತ್ಸಲ್ಯವೇ ಮೈತಾಳಿದಂತಿದ್ದ ಶ್ರೀಮಾತೆಯವರು ಕೆಲವು ಕಠಿಣ ಪರಿಸ್ಥಿತಿಗಳಲ್ಲಿ ಹೇಗೆ ಸ್ಪಂದಿಸುತ್ತಿದ್ದರು ಎಂಬುದನ್ನು ಕೆಲವು ಘಟನೆಗಳ ಮೂಲಕ ನಿರೂಪಿಸಿರುವ ಬ್ರಹ್ಮಚಾರಿ ಪ್ರಹ್ಲಾದ ಅವರು ಬೆಂಗಳೂರಿನ ಅಲಸೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

**ದೇ**ವೀಮಾಹಾತ್ಮ್ಯದಲ್ಲಿ ದೇವಿಯನ್ನು **ಚಿತ್ತೇ ಕೃಪಾ ಸಮರ ನಿಷ್ಠುರತಾ** ಎಂಬುದಾಗಿ ವರ್ಣಿಸಲಾಗಿದೆ. ಅಂದರೆ ಮನಸ್ಸಿನಲ್ಲಿ ಕೃಪೆಯನ್ನು ತುಂಬಿಕೊಂಡು ತನ್ನ ಕಾರ್ಯನಿರ್ವಹಣೆಯಲ್ಲಿ ದೃಢತೆ-ನಿಷ್ಠುರತೆಯನ್ನು ಹೊಂದಿರುವವಳು ಎಂದು. ಈ ಕೃಪಾಮಯಿ ತನ್ನ ಕೃಪೆಯಿಂದಲೇ ಜಗತ್ತಿನ ದುಷ್ಟರನ್ನು ತಾನೇ ಸ್ವತಃ ಸಂಹರಿಸಿ ಅವರಿಗೆ ಮುಕ್ತಿಯನ್ನು ನೀಡುತ್ತಾಳೆ. ಜಗನ್ಮಾತೆ ತಾನು ಅವತರಿಸಿದಾಗಲೆಲ್ಲಾ ತನ್ನ ನಿಜಸ್ವರೂಪವನ್ನು ತನಗೇ ಅರಿವಿದ್ದೋ ಅಥವಾ ಅರಿವಿಲ್ಲದೆಯೋ ಹಲವು ಘಟನೆಗಳ ಮೂಲಕ ವ್ಯಕ್ತಪಡಿಸುತ್ತಾಳೆ. ಆದರೆ ಅದು ಶುದ್ಧ ಮನಸ್ಸಿನ ಭಕ್ತರಿಗೆ ಮಾತ್ರ ತಿಳಿಯುವುದೇ ಹೊರತು, ಅವುಗಳನ್ನು ಸಾಮಾನ್ಯ ಘಟನೆಗಳೆಂದು ಭಾವಿಸುವ ಜನರಿಗಲ್ಲ.

ಪುರಾಣಕಾಲದಲ್ಲಿ ಜಗನ್ಮಾತೆ ಅವತರಿಸಿ ರಾಕ್ಷಸರನ್ನು, ದುಷ್ಟರನ್ನು ಶಸ್ತ್ರಾಸ್ತ್ರಗಳಿಂದ ಸಂಹರಿಸಿ, ಭಕ್ತರನ್ನು, ಶಿಷ್ಟರನ್ನು ರಕ್ಷಿಸುತ್ತಿದ್ದಳು. ಆದರೆ ಈಗ ಅಂತಹ ರಾಕ್ಷಸರು, ದೈತ್ಯರು, ದುಷ್ಟರು ಬಾಹ್ಯದಲ್ಲಿ ಇಲ್ಲ. ಅವರೆಲ್ಲ ಮಾನವನ ಹೃದಯವನ್ನು, ಬುದ್ಧಿಯನ್ನು ಹೊಕ್ಕು ಕುಳಿತಿದ್ದಾರೆ. ಹಾಗೆಂದ ಮೇಲೆ ಜಗನ್ಮಾತೆಯ ಶಿಷ್ಟಪಾಲನಾ ಕಾರ್ಯದಲ್ಲಿ ಸ್ವಲ್ಪ ಬದಲಾವಣೆ ಆಗಬೇಕಾಯಿತು ಅಲ್ಲವೆ? ಹೌದು. ಬಾಹ್ಯದ ಶತ್ರುಗಳನ್ನು ವಧಿಸುವುದು ಸುಲಭ. ಅದಕ್ಕೆ ಬೇಕಾಗುವುದು ಶಸ್ತ್ರಗಳು ಮತ್ತು ಅಸ್ತ್ರಗಳು. ಆದರೆ ಆಂತರಿಕ ಶತ್ರುಗಳ ನಾಶ ಬಹು ಕಷ್ಟಕರ ಮತ್ತು ಅವರ ಮರ್ದನಕ್ಕೆ ಬೇಕಾಗುವ ಆಯುಧಗಳೂ ಕೂಡ ಬೇರೆಯೇ. ಅದಕ್ಕಾಗಿಯೇ ದುಷ್ಟ ಶತ್ರುವಿನ ದಮನಕ್ಕಾಗಿ ಈ ಯುಗದಲ್ಲಿ ಜಗನ್ಮಾತೆಯು "ಶ್ರೀಶಾರದಾ ದೇವಿ" ರೂಪದಲ್ಲಿ ಕರುಣೆ, ವಾತ್ಸಲ್ಯ, ಮಮತೆ ಮುಂತಾದ ಅಸ್ತ್ರಗಳೊಂದಿಗೂ ಕಠಿಣತೆ, ನಿಷ್ಠುರತೆ, ಧೈರ್ಯಗಳೆಂಬ ಶಸ್ತ್ರಗಳೊಂದಿಗೂ ಅವತರಿಸಿ ಬಂದಿದ್ದಾಳೆ. ಆದರೂ ತನ್ನ ಚಿತ್ತದಲ್ಲಿ ಕಿಂಚಿತ್ತೂ ಕೋಪ, ದ್ವೇಷಗಳಿಲ್ಲದೆ ತನ್ನ ಕಾರ್ಯದಲ್ಲಿ ನಿಷ್ಠುರಳಾದುದನ್ನು ನಾವು ಅವರ ಜೀವನದ ಕೆಲವು ಸಂದರ್ಭಗಳಲ್ಲಿ ಕಾಣಬಹುದು.

ಒಮ್ಮೆ ಒಬ್ಬ ಭಕ್ತ ಶ್ರೀಮಾತೆಯವರ ಚರಣಗಳನ್ನು, ತಾನು ಪಾಪಿ ಎಂಬ ಕಾರಣಕ್ಕಾಗಿ ಮುಟ್ಟಲು ಹಿಂಜರಿದಾಗ ಶ್ರೀಮಾತೆಯವರು ಹೇಳುತ್ತಾರೆ, "ನಾವು ಬಂದಿರುವುದೇ ಅದಕ್ಕಾಗಿ. ನೀನು ಅದಕ್ಕಾಗಿ ಭಯ ಪಡಬೇಡ" ಎಂದು. ಆ ವ್ಯಕ್ತಿಗೆ ತಿಳಿದಿದೆ ತಾನು ಪಾಪಿ ಎಂದು. ಆದರೆ ಕರುಣಾಮಯಿ ಮಾತೆಯವರು ತಮ್ಮ ಅಪಾರವಾದ ಪುತ್ರವಾತ್ಸಲ್ಯದಿಂದ ಆತನ ಪಾಪವನ್ನು ಸ್ವೀಕರಿಸುವ ಕೃಪಾಮಯಿಯಾಗಿದ್ದಾರೆ. ಅಂತಹ ಕರುಣಾಮಯಿ ಶ್ರೀಮಾತೆ



ಶ್ರೀಮಾತೆಯವರ ಪವಿತ್ರ ಚರಣಚಿಹ್ನೆಗಳು

ಮತ್ತೊಂದು ಸಂದರ್ಭದಲ್ಲಿ ಕಠಿಣ ಹೃದಯದವರಾಗುವುದನ್ನು ನಾವು ಕಾಣುತ್ತೇವೆ. ಆ ಘಟನೆ ಹೀಗಿದೆ:

ಶ್ರೀರಾಮಕೃಷ್ಣರ ಮಹಾಸಮಾಧಿಯ ಅನಂತರ ಶ್ರೀಮಾತೆಯವರು ಕಾಮಾರಪುಕುರದಲ್ಲಿದ್ದಾಗ ಅಲ್ಲಿಗೆ ಹರೀಶನೆಂಬ ಶ್ರೀರಾಮಕೃಷ್ಣರ ಒಬ್ಬ ಭಕ್ತ ಬಂದಿದ್ದ. ಆತನ ಹೆಂಡತಿಯು, ಶ್ರೀರಾಮಕೃಷ್ಣರ ಸಂಪರ್ಕದಿಂದ ಎಲ್ಲಿ ತನ್ನ ಪತಿ ಸಂನ್ಯಾಸಿಯಾಗಿ ಬಿಡುತ್ತಾನೋ ಎಂದು ಹೆದರಿ, ಅವನಿಗೆ ಒಂದು ಮದ್ದು ಹಾಕಿಸಿದ್ದಳು. ಇದರಿಂದ ಅವನ ತಲೆಕೆಟ್ಟು ಹುಚ್ಚು ಹಿಡಿಯಿತು. ಆ ಸ್ಥಿತಿಯಲ್ಲಿ ಕಾಮಾರಪುಕುರಕ್ಕೆ ಬಂದಿದ್ದ ಆತ. ಒಂದು ದಿನ ಶ್ರೀಮಾತೆಯವರು ಪರಿಚಯಸ್ಥರ ಮನೆಯಿಂದ ತಮ್ಮ ಮನೆಗೆ ಮರಳಿ ಬರುತ್ತಿದ್ದರು. ಇನ್ನೇನು ತಮ್ಮ ಮನೆಯ ಅಂಗಳದಲ್ಲಿ ಕಾಲಿಟ್ಟ ಕೂಡಲೆ ಆ ಹುಚ್ಚ ಅವರನ್ನು ಅಟ್ಟಿಸಿಕೊಂಡು ಬಂದ. ಎತ್ತರದ ಕಟ್ಟುಮಸ್ತಾದ ಆತ ಶಕ್ತಿವಂತನೇ ಆಗಿದ್ದ. ಅದಲ್ಲದೆ ಹುಚ್ಚು ಹಿಡಿದವರಿಗೆ ಇನ್ನೂ ಸ್ವಲ್ಪ ಶಕ್ತಿ ಹೆಚ್ಚು. ಶ್ರೀಮಾತೆ ಅವನಿಂದ ತಪ್ಪಿಸಿಕೊಳ್ಳಲು ಅವಸರವಸರವಾಗಿ ಓಡಿ, ಅಲ್ಲೇ ಹತ್ತಿರದ ಹುಲ್ಲಿನ ಬಣವೆಯೊಂದನ್ನು ಏಳು ಬಾರಿ ಸುತ್ತಿದರು. ಅವನೂ ಅವರನ್ನು ಅಟ್ಟಿಸಿಕೊಂಡು ಬರುತ್ತಿದ್ದ. ಅನಂತರ ಸುಸ್ತಾಗಿ ಶ್ರೀಮಾತೆಯವರು ಓಡದಾದರು. ಆಗ ಅವರೇ ಹೇಳುವಂತೆ,

"ನಾನು ನನ್ನ ನಿಜರೂಪ ತಾಳಿ ಸ್ಥಿರವಾಗಿ ನಿಂತುಬಿಟ್ಟೆ." ಈಗ ಜಗನ್ಮಾತೆ ತನ್ನ ನಿಷ್ಠುರರೂಪವಾದ ಬಗಲಾ ದೇವಿಯಾಗಿ ಪರಿವರ್ತಿತಳಾಗಿ, ಅವನನ್ನು ಎದುರಿಸಿ, ಕೆಳಗೆ ಬೀಳಿಸಿ ಅವನ ಎದೆಯ ಮೇಲೆ ಕಾಲಿಟ್ಟು, ಅವನ ನಾಲಿಗೆ ಹಿಡಿದೆಳೆದು, ಕೆನ್ನೆಗೆ ನಾಲ್ಕು ಬಾರಿಸಿ ಚುರುಕು ಮುಟ್ಟಿಸಿಬಿಟ್ಟರು. ಅದು ನಿಜವಾದ ರೌದ್ರಾವತಾರ ತಾಳಿದ ಕ್ಷಣವಾಗಿತ್ತು. ಈ ಹೊಡೆತ ಹರೀಶನನ್ನು ವಿಗ್ರಮೆಗೊಳಿಸಿತ್ತು. ಆತ ಏದುಸಿರು ಬಿಡಲಾರಂಭಿಸಿದ. ಅವನಲ್ಲಿದ್ದ ಆ ಹುಚ್ಚುತನದ ರಾಕ್ಷಸನ ಮರ್ದನವಾಯಿತು. ಇದಾದ ಮೇಲೆ ಅವನ ಹುಚ್ಚೂ ಬಿಟ್ಟುಹೋಯಿತು.

ಶ್ರೀಮಾತೆಯವರ ಜೀವನದ ಮತ್ತೊಂದು ಘಟನೆಯನ್ನು ನೋಡೋಣ. ಶ್ರೀಮಾತೆಯವರು ಕೋಯಲ್‌ಪಾರಾದಲ್ಲಿದ್ದ ಸಮಯ. ಆಗ ಅವರ ಮನಸ್ಥಿತಿ ಹೇಗಿತ್ತೆಂದರೆ, ಅವರ ಮನಸ್ಸಿಗೆ ಯಾವ ಆಲೋಚನೆ ಬರುವುದೋ ಅದು ನಡೆದೇ ತೀರುತ್ತಿತ್ತು. ಆಗ ರಾಧಿಯ ಆರೋಗ್ಯ ಸುಧಾರಣೆಗಾಗಿ ಮತ್ತು ಆಕೆಗೆ ಶಬ್ದವೆಂದರೆ ಅಲರ್ಜಿ ಎಂಬಂತಾಗಿದ್ದರಿಂದ ಕೊಲ್ಕತ್ತಾದಿಂದ ಇಲ್ಲಿನ ಜಗದಂಬಾ ಆಶ್ರಮಕ್ಕೆ ಬಂದು ತಂಗಿದ್ದರು. ಆಗ ಮಳೆಗಾಲ. ಮಳೆಯೋ ಭರೋ ಎಂದು ಸುರಿಯುತ್ತಾ ಇತ್ತು. ಒಂದು ದಿನ ಮಳೆ ನಿಂತು ಆಕಾಶ ಸ್ವಚ್ಛವಾಗಿದ್ದಿತು. ಹಲವು ದಿನದಿಂದ ಹೊರಗೆ ಬರಲಾಗದಿದ್ದುದರಿಂದ ಮತ್ತು ಅಂದು ಸ್ವಲ್ಪ ಸಮಯ ಬಿಡುವು ಸಿಕ್ಕಿತು ಅಂತ ಶ್ರೀಮಾತೆಯವರು ತಮ್ಮ ಸ್ತ್ರೀಸಂಗಾತಿಗಳೊಡನೆ ಹೊರಗೆ ಬಂದರು. ರಾತ್ರಿ ಸುಮಾರು ೧೦ ಗಂಟೆ ಸಮಯ. ಆಶ್ರಮದ ಎದುರಿಗಿದ್ದ ಹುಣಸೇಮರದ ಕೆಳಗೆ ಎಲ್ಲರೂ ಕುಳಿತಿದ್ದರು. ಅದೂ ಇದೂ ಮಾತಾಡುತ್ತ ಇದ್ದಕ್ಕಿದ್ದ ಹಾಗೆ ಶ್ರೀಮಾತೆಗೆ ಸಿಹೋರಿನ ಸಂಗೀತಗಾರ ಚಾರುವಿನ ನೆನಪಾಯಿತು. ಅವನಿಗೆ ಆಗ ಹುಚ್ಚು ಹಿಡಿದಿತ್ತು. ಅವರು ಹೇಳಿದರು, "ಚಾರು ಬಹಳ ದಿನಗಳಿಂದ ಈ ಕಡೆ ಬಂದಿಲ್ಲ. ಅವನೇನಾದ್ರೂ ಈಗ ಬಂದ್ರೆ ಬಹಳ ಗಲಾಟೆ ಎಬ್ಬಿಸಿಬಿಡ್ತಾನೆ. ನನಗ್ಯಾಕೋ ಭಯವಾಗ್ತಾ ಇದೆ" ಎಂದು. ಆಗ ಅಲ್ಲಿದ್ದವರಲ್ಲಿ ಒಬ್ಬಳು, "ಅಲ್ಲಮ್ಮಾ, ಅವನನ್ನು ಈಗ್ಯಾಕೆ ನೆನಪಿಸಿಕೊಂಡ್ರಿ? ಅವನೇನಾದ್ರೂ ಬಂದ್ರೆ ನಮ್ಮ ಗತಿ ಏನು?" ಅಂದಳು. ಅದಕ್ಕೆ ಶ್ರೀಮಾತೆಯವರು ಹೇಳಿದರು: "ಏನೋಪ್ಪ, ಯಾರಿಗೆ ಗೊತ್ತು? ಅವನು ಬಂದ್ರೂ ಬರಬಹುದೇನೋ ! ಆದರೂ ತುಂಬಿ ಹರಿತಾ ಇರೋ ಹೊಳೆ ದಾಟಿ ಬರೋದಕ್ಕೆ ಸಾಧ್ಯಾನಾ?" ಇನ್ನೂ ಈ ಮಾತು ಮುಗಿದಿರಲಿಲ್ಲ. ಆಗಲೇ ಚಾರು ಹಾಜರು. ತಲೆಗೆ ತಾಳೇಗರಿ ಟೊಪ್ಪಿ, ಬಗಲಲ್ಲಿ ನುಗ್ಗೆಸೊಪ್ಪಿನ ಗಂಟು. ವಿಚಿತ್ರ ಬಟ್ಟೆ. ಅವನನ್ನು ನೋಡಿದ್ದೇ ತಡ, ಒಬ್ಬಳು ಕಿಟಾರ್ ಅಂತ ಕಿರುಚಿಕೊಂಡು ಓಡಿಹೋಗಿ, ಕೋಣೆ ಸೇರಿ, ಒಳಗಿನ ಚಿಲಕ ಭದ್ರಮಾಡಿಬಿಟ್ಟಳು. ಮಿಕ್ಕವರು ಹೆದರಿಕೆಯಿಂದ ನಡುಗುತ್ತಾ ಇದ್ದಾರೆ. ಆಗ ಶ್ರೀಮಾತೆಯವರು ವಾತ್ಸಲ್ಯದಿಂದ ಹೇಳಿದರು, "ಚಾರು, ಈ ಮಧ್ಯರಾತ್ರಿಯಲ್ಲಿ ಇಲ್ಲಿ ಗಲಾಟೆ ಮಾಡಬೇಡ. ಈಗಲೇ ಇಲ್ಲಿಂದ ಹೊರಟುಬಿಡು" ಎಂದು. ಅದಕ್ಕೆ ಆ ಹುಚ್ಚ "ಅದ್ಹೇಗೆ ಹೋಗಲಿ ನಾನು? ಹೊಳೆ ಬೇರೆ ತುಂಬಿ ಹರಿತಾ ಇದೆ. ತಗೊಳ್ಳಿ ನಿಮಗೆ ಅಂತಾನೇ ಈ ನುಗ್ಗೆಸೊಪ್ಪು ತಂದಿದ್ದೀನಿ" ಎಂದು ಅದನ್ನು ಮುಂದಕ್ಕೆ ಚಾಚಿದ. ಅಲ್ಲಿದ್ದವರಿಗೆ ಅವನೂ ಬೇಡ, ಅವನ ಸೊಪ್ಪೂ ಬೇಡ ಎಂಬಂತಾಗಿತ್ತು. ಅಲ್ಲಿದ್ದ ವರದ ಎಂಬ ಬ್ರಹ್ಮಚಾರಿಗಳು ಕೇಳಿದರು, "ಬರಬೇಕಾದ್ರೆ ಹೇಗಯ್ಯ ಬಂದೆ?" ಎಂದು. ಅದಕ್ಕೆ ಆ ಹುಚ್ಚ ಹೇಳಿದ, "ಈಜಿಕೊಂಡು ಬಂದೆ" ಎಂದು. "ಹಾಗೇ ಹಿಂದಕ್ಕೆ ಹೋಗು" ಎಂಬ ಉತ್ತರ ವರದರ ಬಾಯಿಂದ ಬರುವುದಕ್ಕೆ ಮೊದಲೇ ಶ್ರೀಮಾತೆಯವರು ಅವನಿಗೆ ಸ್ವಲ್ಪ ದೃಢವಾಗಿಯೇ ಹೇಳಿದರು, "ಚಾರು, ನೀನು ತುಂಬ ಒಳ್ಳೆಯವನಲ್ವೆ? ಹಾಗಾದರೆ ಈಗ ಗಲಾಟೆ ಮಾಡದೆ ಇಲ್ಲಿಂದ ಹೊರಟುಬಿಡು" ಎಂದು. ಈ ಮಾತು ಕೇಳಿದ ಚಾರು ಅಲ್ಲಿಂದ ಜಾಗ ಖಾಲಿ ಮಾಡಿದ. ಆಮೇಲೆಯೇ ಅಲ್ಲಿದ್ದವರಿಗೆ ಹೋದ ಪ್ರಾಣ ಬಂದಂತಾಯಿತು.

ಈ ಘಟನೆಯನ್ನು ಕಂಡಾಗ ಶ್ರೀಮಾತೆಯವರು ಆ ಹುಚ್ಚನನ್ನು, ಹೊಳೆಯು ಮಳೆನೀರಿನಿಂದ ತುಂಬಿ ಹರಿಯುತ್ತಿದ್ದರೂ, ರಾತ್ರಿಯ ವೇಳೆಯಲ್ಲಿ ಈಜಿಕೊಂಡು ಬಂದವನನ್ನು, ಪ್ರೀತಿಯಿಂದ ಸೊಪ್ಪನ್ನು ತಂದುಕೊಟ್ಟವನನ್ನು ಆ ಮಧ್ಯರಾತ್ರಿಯಲ್ಲೇ ಹಿಂದಕ್ಕೆ ಹೋಗು ಎಂದರಲ್ಲ, ಇದು ಸರಿಯೇ ಎಂಬ ಭಾವನೆ ಬರಬಹುದು. ಆದರೆ ಅದು ಶ್ರೀಮಾತೆಯವರು ವಾತ್ಸಲ್ಯ ಕರುಣೆ ತೋರುವಂತಹ ಸಮಯ ಅಲ್ಲ ಎಂಬುದು ಸ್ವಲ್ಪ ಯೋಚಿಸಿ ನೋಡಿದರೆ ಅರಿವಿಗೆ ಬರುತ್ತದೆ. ಏಕೆಂದರೆ ಆ ಸಮಯದಲ್ಲಿ ಶ್ರೀಮಾತೆಯವರ ಬಳಿ ಇದ್ದವರು ಹೆಚ್ಚಾಗಿ ಹೆಂಗಸರು. ಒಬ್ಬಳು ಈಗಾಗಲೇ ಭಯಭೀತಳಾಗಿ ಕೋಣೆ ಸೇರಿದ್ದಾಳೆ. ಮತ್ತೆ ಕೆಲವರು ಹೆದರಿ ನಡುಗುತ್ತಿದ್ದಾರೆ. ಒಬ್ಬನಿಗಾಗಿ ಹಲವರು ಕಷ್ಟ ಅನುಭವಿಸುವಂತಹ ಸನ್ನಿವೇಶಕ್ಕೆ ಅವಕಾಶ ಕೊಡದೆ ಶ್ರೀಮಾತೆಯವರು ಸ್ವಲ್ಪ ಕಠಿಣರಾಗಿ ಅವನು ಹಿಂದಿರುಗಿ ಹೋಗುವಂತೆ ಮಾಡಿದರು. ಇದರಿಂದ ಅವರ ವಾತ್ಸಲ್ಯ-ಕರುಣೆಗೆ ಧಕ್ಕೆಯೇನೂ ಉಂಟಾಗುವುದಿಲ್ಲ. ಮೊದಲನೆಯದಾಗಿ ಆತ ಹುಚ್ಚ. ಯಾವಾಗ ಯಾವ ರೀತಿ ನಡೆದುಕೊಳ್ಳುತ್ತಾನೋ ಭಗವಂತನೇ ಬಲ್ಲ. ಎರಡನೆಯದಾಗಿ ರಾಧಿ. ಈಕೆಗೆ ಶಬ್ದವೆಂದರೆ ಆಗದು. ಅದಕ್ಕಾಗಿಯೇ ಶ್ರೀಮಾತೆ ಕೊಲ್ಕತಾವನ್ನೂ ಅಲ್ಲಿಯ ವೈದ್ಯಕೀಯ ಸೌಲಭ್ಯವನ್ನೂ ತೊರೆದು ಇಲ್ಲಿಗೆ ಬಂದಿದ್ದರು. ಇಲ್ಲಿ ಈ ಹುಚ್ಚ ಗಲಾಟೆ ಎಬ್ಬಿಸಿಬಿಟ್ಟರೆ ರಾಧಿಯ ಗತಿಯೇನು? ಮೂರನೆಯದಾಗಿ, ಯಾರಿಗೆ ಯಾವಾಗ ವಾತ್ಸಲ್ಯ ತೋರಬೇಕು, ಯಾವಾಗ ಕಾಠಿಣ್ಯವನ್ನು ತೋರಬೇಕು ಎಂಬುವ ವಿವೇಕ ಶ್ರೀಮಾತೆಯವರಲ್ಲಿತ್ತು. ಅದಕ್ಕಾಗಿಯೇ ಮಾತೃಹೃದಯದ ಶ್ರೀಮಾತೆಯವರು ತಮ್ಮ ಮನಸ್ಸಿಗೆ ನೋವಾದರೂ, ದುಃಖವಾದರೂ ಅವನನ್ನು ಬಂದ ದಾರಿಯಲ್ಲೇ ಹಿಂದಿರುಗುವಂತೆ ಮಾಡಿದರು.

ಒಮ್ಮೆ ಶ್ರೀಮಾತೆಯವರು ಉದ್ಬೋಧನದಲ್ಲಿದ್ದ ಸಮಯ. ಸಂಜೆ ಮಾಳಿಗೆಯ ಮೇಲೆ ಕುಳಿತುಕೊಂಡು ಜಪದಲ್ಲಿ ತಲ್ಲೀನರಾಗಿದ್ದರು. ಎದುರಿಗಿರುವ ಮೈದಾನದಲ್ಲಿ ಕೂಲಿಯಾಳುಗಳ ಹಲವಾರು ಚಿಕ್ಕ ಪುಟ್ಟ ಗುಡಿಸಲುಗಳಿದ್ದವು. ಆಗ ಒಬ್ಬ ತನ್ನ ಹೆಂಡತಿಯನ್ನು ಕೋಪಾವೇಶದಿಂದ ಹೊಡೆಯುತ್ತಿದ್ದ. ಆಕೆಯೋ

ಹೊಡೆತಗಳನ್ನು ತಿಂದು ಜರ್ಝರಿತಳಾಗಿ ಅಳುತ್ತಿದ್ದಳು. ಆದರೆ ಅವಳನ್ನು ಬಿಡಿಸಲು ಮಾತ್ರ ಯಾರೂ ಮುಂದೆ ಬರುತ್ತಿಲ್ಲ. ಆ ದುಷ್ಟ ಮೊದಲು ಮುಷ್ಟಿಯಿಂದ ಬಾರಿಸುತ್ತಿದ್ದವ ಈಗ ಕಾಲಿನಿಂದ ಒದೆಯಲಾರಂಭಿಸಿದ. ಮೊದಲೇ ಬಲಹೀನಳಾಗಿದ್ದ, ಕೈಯಲ್ಲಿ ಮಗುವನ್ನು ಹಿಡಿದಿದ್ದ ಆಕೆ ಅಂಗಳಕ್ಕೆ ಬಂದು ಬಿದ್ದಳು. ಅಲ್ಲಿಗೂ ಆತನ ಕೋಪ ಶಾಂತವಾಗದೆ ಪುನಃ ಹೊರಗೆ ಬಂದು ಅವಳನ್ನು ಒದೆಯಲಾರಂಭಿಸಿದ. ಆ ಅಸಹಾಯಕ ಹೆಂಗಸಿನ ಆಕ್ರಂದನ ಶ್ರೀಮಾತೆಯವರ ಕಿವಿಗೆ ಬಿತ್ತು. ಅವರ ಜಪ ನಿಂತಿತು. ಅವರು ಎಂದೂ ಕೂಡ ಇತರರಿಗೆ ಕೇಳಿಸುವಷ್ಟು ಜೋರಾಗಿ ಮಾತನಾಡಿದವರಲ್ಲ. ಆದರೆ ಅಂದು ಅವರು ಎದ್ದು ನಿಂತು ಗಟ್ಟಿಯಾಗಿ ಕೂಗಿದರು : "ಎಲೋ ನೀಚ, ನಿನ್ನ ಹೆಂಡತಿಯನ್ನು ಕೊಲ್ಲಬೇಕು ಅಂತಿದ್ದೀಯೇನೋ?" ಆ ಧ್ವನಿ ಮೈದಾನದಲ್ಲಿದ್ದ ಆ ದುಷ್ಟನಿಗೆ ಕೇಳಿಸಿತು. ಕೇಳಿದ ಕೂಡಲೆ, ಗರುಡನನ್ನು ಕಂಡ ಸರ್ಪದಂತೆ ಆತ ತಲೆಮರೆಸಿಕೊಂಡ. ಆ ಹೆಂಗಸಿನ ಕಷ್ಟ ತಪ್ಪಿತು. ಆ ದುಷ್ಟನ ದುಷ್ಟತನ ನಾಶವಾಯಿತು. ಅನಂತರ ಬಂದು ತನ್ನ ಹೆಂಡತಿಯನ್ನು ಸಮಾಧಾನ ಮಾಡಿ ಕರೆದುಕೊಂಡು ಹೋದ.

ಸಹಜ ಶಾಂತಸ್ವಭಾವದ ಶ್ರೀಮಾತೆಯವರು ಎಂದೂ ಜೋರಾಗಿ ನಕ್ಕವರಲ್ಲ. ಅಂತಹದ್ದರಲ್ಲಿ ಅಟ್ಟಹಾಸ ಮಾಡುವುದೆಂದರೇನು? ಒಂದು ಘಟನೆ ನೋಡೋಣ. ಶ್ರೀರಾಮಕೃಷ್ಣರ ಸೋದರಳಿಯ ಶಿವರಾಮ. ಅವನ ಹೆಂಡತಿಗೆ ಅದೇನು ಕೇಡು ಬುದ್ಧಿ ಬಂತೋ ಗೊತ್ತಿಲ್ಲ. ಶಿವರಾಮ ಕಾರ್ಯಾರ್ಥವಾಗಿ ಬೇರೆ ಊರಿಗೆ ಹೋದಾಗ ಅವನ ಮಗಳನ್ನು ಹೀನಕುಲದ ಹುಡುಗನೊಬ್ಬನಿಗೆ ಕೊಟ್ಟು ಮದುವೆ ಮಾಡಲು ಯೋಚಿಸಿ, ಆ ಹುಡುಗಿಯನ್ನು ಒಂದು ಕೋಣೆಯಲ್ಲಿ ತಪ್ಪಿಸಿಕೊಂಡು ಹೋಗದಂತೆ ಕೂಡಿಹಾಕಿದಳು. ಅದನ್ನು ಕಂಡ ಇಬ್ಬರು ಭಕ್ತರು ಉಪಾಯವಾಗಿ ಜಯರಾಂಬಾಟಿಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಆ ಹುಡುಗಿಯನ್ನು ಕರೆತಂದರು. ಆಗ ಭಕ್ತನೊಬ್ಬ ಮಾತಿನ ಸಂದರ್ಭದಲ್ಲಿ ಹೇಳಿದ : "ಅಮ್ಮಾ! ಈ ಮದುವೆಗೆ ಲಾಹಾ ಮನೆತನದವರ ಬೆಂಬಲವಿದೆ. ಈಗ ನಾವು ಈ ಹುಡುಗಿಯನ್ನು ಅವರಿಗೆ ತಿಳಿಯದಂತೆ ಕರೆತಂದಿರುವುದರಿಂದ ಅವರು ಕೋಪಗೊಳ್ಳಬಹುದು. ಅದರ ಪರಿಣಾಮವಾಗಿ ಕಾಮಾರಪುಕುರದಲ್ಲಿ ಶ್ರೀರಾಮಕೃಷ್ಣರ ದೇವಾಲಯ ಕಟ್ಟಲು ಅವರು ಬಿಡದಿರಬಹುದು. ಈಗ ನಾವೇನು ಮಾಡುವುದು?" ಅದಕ್ಕೆ ಜೊತೆಗಿದ್ದ ಇನ್ನೊಬ್ಬ "ಅದಕ್ಕೇನಂತೆ ಈಗ. ಈಗಾಗಲೇ ಬೇಕಾದಷ್ಟು ಮಠಗಳಿವೆ. ಅವಕಾಶ ಕೊಡದಿದ್ದರೆ ಬೇಡ" ಎಂದ. ಅದಕ್ಕೆ ಶ್ರೀಮಾತೆಯವರು, "ಅದೇನಪ್ಪ ಹೀಗೆಂದುಬಿಟ್ಟೆ! ಶ್ರೀರಾಮಕೃಷ್ಣರ ಜನ್ಮಸ್ಥಳವೆಂದರೆ ಅದೊಂದು ತೀರ್ಥಕ್ಷೇತ್ರ. ಅದು ಮಹಾಪೀಠ" ಎಂದರು. ಆಗ ಮೊದಲ ಭಕ್ತ, "ಅಮ್ಮಾ! ನಮ್ಮ ಈ ಕಾರ್ಯದಿಂದ ಶಿವರಾಮನ ಹೆಂಡತಿ ಬೇಸರಗೊಂಡು ಶ್ರೀರಾಮಕೃಷ್ಣರ ಗುಡಿಸಲಿಗೆ ಬೆಂಕಿ ಹಾಕಿದರೆ?" ಈ ಮಾತನ್ನು ಕೇಳಿ ಶ್ರೀಮಾತೆಯವರು ನಗುತ್ತಾ, "ಒಳ್ಳೆಯದೇ ಆಯ್ತು. ಶ್ರೀರಾಮಕೃಷ್ಣರು ಸ್ಮಶಾನವನ್ನು ಪ್ರೀತಿಸುತ್ತಿದ್ದರು. ಈಗ ಅದು ಸ್ಮಶಾನವೇ ಆಗಿಬಿಡುತ್ತದೆ" ಎಂದು ನಗುತ್ತಾ ಹೇಳಿದರು. ಅದಕ್ಕೆ ಭಕ್ತರು ತಮ್ಮ ನಗುವನ್ನೂ ಸೇರಿಸಿದರು. ಆದರೆ ಇದ್ದಕ್ಕಿದ್ದ ಹಾಗೆ ಶ್ರೀಮಾತೆಯವರ ನಗು ಅಟ್ಟಹಾಸವಾಗಲಾರಂಭಿಸಿತು. ಆ ಧ್ವನಿ ಉಳಿದ ಭಕ್ತರ ನಗುವಿನ ಧ್ವನಿಯನ್ನು ಮೀರಿತು. ಅವರನ್ನು ನೋಡುತ್ತಿದ್ದ ಭಕ್ತರ ನಗು ಭಯದಿಂದ ನಿಂತುಹೋಯಿತು. ಶ್ರೀಮಾತೆಯವರ ಬದಲಾದ ನಗು ಮತ್ತು ರೂಪ ಕಂಡು ಭಕ್ತರು ಬೆದರಿದರು. ತಕ್ಷಣ ಅದನ್ನು ಗಮನಿಸಿದ ಶ್ರೀಮಾತೆಯವರು ತಮ್ಮ ನಗುವನ್ನು ನಿಲ್ಲಿಸಿ ಮೃದುವಾದರು, ಶಾಂತರಾದರು.

ನಾವಿಲ್ಲಿ ಸ್ವಲ್ಪ ಆಲೋಚಿಸಬೇಕಾದ ಆವಶ್ಯಕತೆ ಇದೆ. ಸಾವು ನೋವಿನ ವಿಚಾರವನ್ನು ಕೇಳಿದ ಯಾರೇ ಆಗಲಿ ಭಯಭೀತರಾಗುವುದು, ದುಃಖಿತರಾಗುವುದು ಸರ್ವೇಸಾಮಾನ್ಯ. ಅಂತಹ ಸನ್ನಿವೇಶದಲ್ಲಿ ನಗುವುದು ಅಸಾಧ್ಯ. ಸಾವುನೋವಿನ ಬೀಡು ಈ ಸ್ಮಶಾನ. ಇದನ್ನು ನೆನೆದು ನಗುವುದು, ಅಟ್ಟಹಾಸಗಯ್ಯುವುದು ಸಾಮಾನ್ಯವೇ? ಲಜ್ಜಾಪಟಾವೃತೆ ಶಾಂತರೂಪಿಣಿಯಾದ ಶ್ರೀಮಾತೆಯವರು ಅಟ್ಟಹಾಸ ಮಾಡುವುದೆಂದರೇನು? ಆ ಅಟ್ಟಹಾಸ ಭಕ್ತರ ಎದೆಯನ್ನು ನಡುಗಿಸಿ ಭಯಗೊಳಿಸುವುದೆಂದರೇನು? ಇದು ಸ್ಮಶಾನವಾಸಿಯಾದ ಕಾಳಭೈರವ ಶಿವ ಮತ್ತು ಅವನ ಶಕ್ತಿ ಕಾಳಿಗಲ್ಲದೆ ಇತರರಿಗೆ ಸಾಧ್ಯವೇ? ಹೌದು. ಆ ಕ್ಷಣದಲ್ಲಿ ಶ್ರೀಮಾತೆಯವರು ತಮ್ಮ ನಿಜಸ್ವರೂಪದೊಡನೆ ಒಂದಾಗಿ ತಮ್ಮನ್ನು ತಾವು ಮರೆತರು. ಅದೂ ಕೆಲವೇ ಕ್ಷಣ. ತಕ್ಷಣ ತಮ್ಮ ಪುತ್ರರು ಬೆದರಿದ್ದನ್ನು ಕಂಡು ಶಾಂತರಾದರು, ವಾತ್ಸಲ್ಯಮಯಿ ತಾಯಿಯಾಗಿ ಬದಲಾದರು. ತಾವು ಮೃದು-ಕಠಿಣ ಪರಿಸ್ಥಿತಿಗಳಲ್ಲಿ ಸಮಾನರು, ಅಸಾಮಾನ್ಯರು ಎಂದು ತೋರಿದರು ಅಷ್ಟೆ. ಸ್ಮಶಾನಕಾಳಿಯ ಆವಿರ್ಭಾವದ ಆವೇಶವನ್ನು ಕ್ಷಣಮಾತ್ರದಲ್ಲಿ ಶಮನಗೊಳಿಸಿದರು. ಅದೂ ಕೂಡ ಅವರ ಶ್ರೇಷ್ಠ ಶಕ್ತಿಗೆ ಸಾಕ್ಷಿ. ಸಾಮಾನ್ಯವಾದ ಕೋಪಾವೇಶವನ್ನೇ ತಡೆಹಿಡಿಯುವುದು ಕಷ್ಟ. ಅಂತಹದ್ದರಲ್ಲಿ ಕಾಳಿಯ ಆ ಆವೇಶವನ್ನು ಕ್ಷಣಮಾತ್ರದಲ್ಲಿ ಅಡಗಿಸಲು ಕಾಳಿಯಿಂದಲ್ಲದೆ ಮತ್ತಾರಿಂದ ಸಾಧ್ಯ?

ಒಮ್ಮೆ ಬೇಲೂರು ಮಠದ ಅಡುಗೆಯವನು ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡ. ಸ್ವಾಮಿ ವಿವೇಕಾನಂದರು ಅವನಿಗೆ ಗೇಟು ತೋರಿಸಿದರು. ಅವನು ಉದ್ಬೋಧನದಲ್ಲಿದ್ದ ಶ್ರೀಮಾತೆಯವರ ರಕ್ಷಣೆ ಪಡೆದ. ತಾಯಿಯ ಹೃದಯ ಕರಗಿತು. ಅಂದು ತಮ್ಮನ್ನು ಕಾಣಲು ಬಂದ ಪ್ರೇಮಾನಂದರಿಗೆ, "ನೋಡು ಮಗು! ಸಂಸಾರ ಜೀವನ ಬಹಳ ಕಷ್ಟವಪ್ಪ. ನೀವು ಸಂನ್ಯಾಸಿಗಳು ಅದನ್ನರಿಯದೆ, ಒಂದು ಚಿಕ್ಕ ತಪ್ಪು ಮಾಡಿದ್ದಕ್ಕೆ ಈ ಅಡುಗೆಯವನನ್ನು ಹೊರಹಾಕುವುದು ಸರಿಯೇ? ಇವನನ್ನು ಕರೆದುಕೊಂಡು ಹೋಗು" ಎಂದರು. ಸ್ವಾಮೀಜಿಯವರ ಕೋಪ ತಿಳಿದಿದ್ದ ಪ್ರೇಮಾನಂದರು ತಮಗೆ ಒದಗಬಹುದಾದ ಪರಿಸ್ಥಿತಿಯನ್ನು ವಿವರಿಸಿದರು. ಆದರೆ ಮಾತೆಯವರು "ನಾನು ಹೇಳುತ್ತಿದ್ದೇನೆ. ಕರೆದುಕೊಂಡು ಹೋಗು" ಎಂದು ಖಡಾಖಂಡಿತವಾಗಿ ಹೇಳಿದರು. ಪ್ರೇಮಾನಂದರು ಮರು ಮಾತಾಡದೆ ಆ ಅಡುಗೆಯವನನ್ನು ಕರೆದುಕೊಂಡು ಹೋದರು.

ಅವರಿಬ್ಬರು ಮಠದ ಗೇಟನ್ನು ದಾಟುತ್ತಿದ್ದಂತೆಯೇ ಸ್ವಾಮಿ ವಿವೇಕಾನಂದರು, "ನೋಡು, ಈ ಬಾಬೂರಾಮನ (ಪ್ರೇಮಾನಂದ) ಕೆಲಸ" ಎಂದು ಬಯ್ಯಲು ಆರಂಭಿಸಿದರು. ಆಗ ಪ್ರೇಮಾನಂದರು, "ಇದು ಶ್ರೀಮಾತೆಯವರ ಆಜ್ಞೆ" ಎಂದರು. ಸ್ವಾಮೀಜಿಯವರು ತಕ್ಷಣ ಸುಮ್ಮನಾದರು. ಈ ಸಂದರ್ಭದಲ್ಲಿ ತಮ್ಮ ಕರುಣೆಯನ್ನು ತೋರಿದ ಶ್ರೀಮಾತೆಯವರು ಉದ್ಬೋಧನದ ಅಡುಗೆಯವನೊಬ್ಬನ ಬಗ್ಗೆ ನಡೆದುಕೊಂಡ ರೀತಿ ತದ್ವಿರುದ್ಧವಾಗಿದೆ. ಅಲ್ಲಿ ಅಡುಗೆಭಟ್ಟನ ಉಪಟಳ ಹೆಚ್ಚಾಗಿ ಹೋಗಿತ್ತು. ಅವನ ಸಹಾಯಕ್ಕಿಂತ ಅವನ ಅಸಹನೆ, ಜಗಳ, ದುರ್ವರ್ತನೆಗಳು ಅಲ್ಲಿನ ಸಾಧು ಬ್ರಹ್ಮಚಾರಿಗಳಿಗೆ ಅಸಹನೀಯವಾಗಿದ್ದವು. ಅವನನ್ನು ಕೆಲಸದಿಂದ ವಜಾ ಮಾಡಿದರೆ ಶ್ರೀಮಾತೆಯವರಿಗೆ ಎಲ್ಲಿ ತೊಂದರೆಯಾಗುವುದೋ ಎಂದು ಮೇನೇಜರ್ ಸ್ವಾಮಿಗಳು ಹಿಂದೆ ಮುಂದೆ ನೋಡುತ್ತಿದ್ದರು. ಆಗ ಶ್ರೀಮಾತೆಯವರು ಹೇಳಿದರು, "ಏನಪ್ಪ ಮಗು! ನೀವೆಲ್ಲ ಸಂನ್ಯಾಸಿಗಳು, ತಂದೆ ತಾಯಿಗಳನ್ನೇ ಬಿಟ್ಟು ಬಂದವರು. ತೊಂದರೆ ಕೊಡುವ ಒಬ್ಬ ಅಡುಗೆಭಟ್ಟನನ್ನು ಕೆಲಸದಿಂದ ತೆಗೆದುಹಾಕುವುದು ಕಷ್ಟವೇ?" ಎಂದು.

ನಾವು ಈ ಘಟನೆಗಳನ್ನು ಪರಿಶೀಲಿಸಿದಾಗ ಶ್ರೀಮಾತೆಯವರು ಎಲ್ಲಿ ಯಾವಾಗ ಮೃದುವಾಗಬೇಕು, ಕರುಣೆ ತೋರಬೇಕು, ಎಲ್ಲಿ ನಿಷ್ಠುರರಾಗಬೇಕು, ದೃಢತೆ ತೋರಬೇಕು ಎಂಬುದನ್ನು ಲೋಕಕ್ಕೆ ಸಾರಿದ ವಿಚಾರ ಅರಿವಿಗೆ ಬರುತ್ತದೆ. ಕರುಣೆಯಿರಬೇಕು, ಹಾಗೆಂದು ಅದು ನಮಗೆ, ಹಲವರಿಗೆ ಕಷ್ಟವನ್ನಾಗಲಿ, ಜೀವನಕ್ಕೆ ತೊಂದರೆಯನ್ನಾಗಲಿ ತರುವಂತಿರಬಾರದು. ಸಮಯಾಸಮಯಗಳ ವಿವೇಕ ಅಗತ್ಯ. **ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ** ಎಂಬ ಮಾತು ಶ್ರೀಮಾತೆಯವರಿಗೆ ಸರಿಯಾಗಿ ಒಪ್ಪುತ್ತದೆ.

## ಭಗವನ್ನಾಮೌಷಧ



ಸ್ವಾಮಿ ವಿಜ್ಞಾನಾನಂದಜಿ

ಅಲಹಾಬಾದ್ ರಾಮಕೃಷ್ಣಮಠಕ್ಕೆ ಸೇರಿದಂತೆ ಒಂದು ಹೋಮಿಯೋಪಥಿಕ್ ಡಿಸ್ಪೆನ್ಸರಿ ಇತ್ತು. ಒಮ್ಮೆ ಅಲ್ಲಿಯ ವೈದ್ಯರು ರಾಜಿನಾಮೆ ಕೊಟ್ಟು ಹೊರಟುಹೋದರು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ವಿಜ್ಞಾನಾನಂದಜಿಯವರು ಆ ಮಠದ ಮುಖ್ಯಸ್ಥರಾಗಿದ್ದರು. ಕೂಡಲೇ ಇನ್ನೊಬ್ಬರು ವೈದ್ಯರು ಸಿಕ್ಕಲಿಲ್ಲ. ಸ್ವಾಮಿಗಳಿಗೆ ರೋಗಿಗಳ ಕಷ್ಟವನ್ನು ನೋಡಿ ಸಹಿಸಲಾಗಲಿಲ್ಲ. ಅವರಿಗೆ ಔಷಧದ ಬಗ್ಗೆ ಏನೂ ಜ್ಞಾನವಿರಲಿಲ್ಲ. "ಇದು ಶ್ರೀರಾಮಕೃಷ್ಣರ ಕೆಲಸ. ಅವರ ಹೆಸರನ್ನು ಹೇಳಿ ನಾನೇ ಔಷಧಿ ಕೊಡುತ್ತೇನೆ" ಎಂದು ನಿಶ್ಚಯಿಸಿ ಪ್ರತಿದಿನ ಡಿಸ್ಪೆನ್ಸರಿಗೆ ಹೋಗತೊಡಗಿದರು. ಬಂದ ರೋಗಿಗಳಿಗೆಲ್ಲ ಕಾಯಿಲೆಯ ಬಗ್ಗೆ ಏನೂ ವಿಚಾರಿಸದೆ ಹೋಮಿಯೋಪಥಿ ಔಷಧಿ ಕೊಡತೊಡಗಿದರು.

ಆಶ್ಚರ್ಯವೆಂದರೆ ಅವರಿಂದ ಔಷಧಿ ಪಡೆದ ಪ್ರತಿಯೊಬ್ಬ ರೋಗಿಯ ಕಾಯಿಲೆಯೂ ಗುಣವಾಗತೊಡಗಿತು. ಈ ಸುದ್ದಿ ಎಲ್ಲ ಕಡೆ ಹರಡಿತು. ಪ್ರತಿದಿನ ಹೆಚ್ಚು ಹೆಚ್ಚು ರೋಗಿಗಳು ಬರತೊಡಗಿದರು. ಜನಸಂದಣಿಯನ್ನು ನಿಯಂತ್ರಿಸುವುದೇ ಕಷ್ಟವಾಗತೊಡಗಿತು. ಆಗ ವಿಜ್ಞಾನಾನಂದರು ವಾರಾಣಸಿಯಿಂದ ಒಬ್ಬ ವೈದ್ಯರನ್ನು ಕರೆತಂದರು. ಹೊಸ ವೈದ್ಯರು ಡಿಸ್ಪೆನ್ಸರಿಯಲ್ಲಿ ಯಾವ ಯಾವ ಔಷಧಿಗಳು ಎಷ್ಟೆಷ್ಟಿವೆ ಎಂದು ನೋಡತೊಡಗಿದಾಗ, ನೈಟ್ರಿಕ್ ಆಮ್ಲದ ಬಾಟ್ಲಿಯೂ ಖಾಲಿಯಾಗಿರುವುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. "ಮಹಾರಾಜ್, ನೀವು ನೈಟ್ರಿಕ್ ಆಮ್ಲವನ್ನೂ ಖಾಲಿ ಮಾಡಿದ್ದೀರಲ್ಲ!" ಎಂದು ವಿಜ್ಞಾನಾನಂದರನ್ನು ಅವರು ಭಯಾಶ್ಚರ್ಯಗಳಿಂದ ವಿಚಾರಿಸಿದರು. ಸ್ವಾಮಿಗಳು ನಿರ್ಲಿಪ್ತತೆಯಿಂದ ಹೇಳಿದರು: "ನಾನು ಶ್ರೀರಾಮಕೃಷ್ಣರ ಹೆಸರಿನಲ್ಲಿ ಔಷಧಿಯನ್ನು ಕೊಟ್ಟಿದ್ದೇನೆ. ಅದರಿಂದ ರೋಗಿಗಳ ಕಾಯಿಲೆ ವಾಸಿಯಾಗಿದೆ. ಇದರಲ್ಲಿ ನನ್ನದೇನೂ ಇಲ್ಲ. ಅವರು ಹೇಳಿದಂತೆ ಮಾಡಿದ್ದೇನೆ."